ಇಂದು ದಿನಾಂಕಃ 07.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿಯ ಪರ ಶ್ರೀ ಆರ್ ಬಿ ಕೆ ವಕೀಲರಿಂದಃ

ಸರ್ವೆನಂ.11 ರಲ್ಲಿ 14 ಎಕರೆ 5 ಗುಂಟೆ ಜಮೀನಿನಲ್ಲಿ ವಿವಾಧಿತ ಆಸ್ತಿ ಯಾವ ಕಡೆಗೆ ಬರುತ್ತದೆ ಎಂದರೆ ಸಾಕ್ಷಿಯು ಉತ್ತರದ ದಿಕ್ಕಿಗೆ ಬರುತ್ತದೆ ಅದರ ಚಕ್ಕಬಂದಿ ಪೂರ್ವಕ್ಕೆ ನೇಮಪ್ಪ ಹುಚ್ಚಪ್ಪ ಉರ್ಫ ಕೀರಪ್ಪ ರವರ ಜಮೀನು, ಪಶ್ಚಿಮಕ್ಕೆ ಗಂಗವ್ವ ಟಾಕರೆಪ್ಪ ಮೂಡಿ ರವರ ಜಮೀನು, ಉತ್ತರಕ್ಕೆ ಗಂಗವ್ವ ಟಾಕರೆಪ್ಪ ಮೂಡಿ ಮತ್ತು ಸಂಪರ್ಕ ರಸ್ತೆ, ದಕ್ಷಿಣಕ್ಕೆ ಕುಸುಮಾ ತಾವರೆಪ್ಪ ಮೂಡಿ ರವರ ಆಸ್ತಿ ಬರುತ್ತದೆ. ನಾನು ಹೇಳುವ ಚಕ್ಕಬಂದಿಯಂತೆ ಯಾವುದೇ ಆಸ್ತಿ ಇಲ್ಲ ಎಂದರೆ ಸರಿಯಲ್ಲ.

2. ಪ್ರತಿವಾದಿಯರು ಅವರ ಆಸ್ತಿಯಲ್ಲಿ ಬೆಳೆದಂತಹ ಬೆಳೆಯನ್ನು ಕಳುವು ಮಾಡಿಕೊಂಡು ಹೋಗಿರುತ್ತೇವೆ ಎಂದರೆ ಸರಿಯಲ್ಲ. ಆ ಬಗ್ಗೆ ಪ್ರತಿವಾದಿಯರು ನಮ್ಮ ವಿರುದ್ಧ ಪೋಲಿಸರಿಗೆ ದೂರನ್ನು ನೀಡಿದರು ಎಂದರೆ ಸರಿಯಲ್ಲ. ಆ ರೀತಿ ದೂರು ದಾಖಲಾಗಿದ್ದ ಬಗ್ಗೆ ಪ್ರಕರಣದ ಸಂಖ್ಯೆ ಸಿ.ಸಿ.ನಂ.160/2020 ರಂತೆ ದಾಖಾಗಿರುತ್ತದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಪ್ರತಿವಾದಿ 1 ರವರು ಸಾಕ್ಷಿ ಹೇಳಿದ್ದ ಕಾರಣದಿಂದ ಆತನ ಮೇಲಿನ ದ್ವೇಷದಿಂದ ನಾನು ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪ್ರತಿವಾದಿಗಳ ವಿರುದ್ಧ ನಾನು ಅಸಲು ದಾವಾ ಸಂಖ್ಯೆ 135/2018 ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. ನನ್ನ ಅಣ್ಣನಾದ ನೇಮಪ್ಪ ರವರು ಪ್ರತಿವಾದಿಯರ ವಿರುದ್ಧ ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 132/2018 ರಂತೆ ದಾವೆ ಹೂಡಿರುತ್ತಾರೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

3. ನ್ಯಾಯಾಲಯಕ್ಕೆ ಸಲ್ಲಿಸಿರುವ ವಾದಪತ್ರದ ಜೊತೆಗೆ ಸೇರಿಸಿರುವಂತಹ ವಂಶಾವಳಿಯನ್ನು ಯಾರು ಹಾಕಿದ್ದಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಅದನ್ನು ನಾನೇ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 132/2018 ರಲ್ಲಿ ನಾನು ನನ್ನ ಅಣ್ಣನಾದ ನೇಮಪ್ಪ ರವರ ಮಕ್ಕಳನ್ನು ಕರೆದುಕೊಂಡು ಬಂದು ಸಾಕ್ಷಿ ವಿಚಾರಣೆಗೆ ಒಳಪಡಿಸಿ ಸಾಕ್ಷಿ ವಿಚಾರಣೆಗೆ ಕರೆದುಕೊಂಡು ಹೋಗುತ್ತಿದ್ದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ವಹಿವಾಟಿಗೆ ನಮಗೆ ನಮ್ಮೂರಿನ ಯಾರು ತಕರಾರು ಮಾಡಿರುವುದಿಲ್ಲ. ದಾವಾ ಆಸ್ತಿಯ ವಹಿವಾಟಿಗೆ ಪ್ರತಿವಾದಿಯವರು ತಕರಾರು ಮಾಡಿರುತ್ತಾರೆ. ಆ ರೀತಿ ಯಾವ ವರ್ಷ, ಯಾವ ತಿಂಗಳಗಳಲ್ಲಿ ತಕರಾರು ಮಾಡಿರುತ್ತಾರೆ ಎಂದು ನನಗೆ ನೆನಪಿರುವುದಿಲ್ಲ.

4. ನಾನು ಪೌಢಶಾಲೆ ಮುಖ್ಯ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಈಗ ನಿವೃತಿ ಹೊಂದಿರುತ್ತೇನೆ. ನಾನು ಶಿಕ್ಷಕನಾಗಿರುವ ಕಾರಣದಿಂದ ತಕರಾರು ಮಾಡಿದ ದಿನಾಂಕ, ತಿಂಗಳು, ವರ್ಷ ನೆನಪಿಟ್ಟುಕೊಳಬಹದು ಎಂದರೆ, ಸಾಕ್ಷಿಯು ದಾವಾ ಆಸ್ತಿಯಲ್ಲ ವಹಿವಾಟನ್ನು ನನ್ನ ತಮ್ಮ ಮಾಡುತ್ತಿದ್ದರು ಅವರು ಈಗ ತೀರಿಕೊಂಡಿರುತ್ತಾರೆ. ನಾನು ವಹಿವಾಟು ಮಾಡಿಲ್ಲದಿದ್ದ ಕಾರಣದಿಂದ ನನಗೆ ಪ್ರತಿವಾದಿಯರು ತಕರಾರು ಮಾಡಿದ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯನ್ನು ನಾನು ವಹಿವಾಟು ಮಾಡಿಲ್ಲದಿದ್ದ ಕಾರಣದಿಂದ ನನಗೆ ದಾವಾ ಆಸ್ತಿಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ದಾವಾ ಆಸ್ತಿ ಜಂಟಿ ಕುಟುಂಬದ ಆಸ್ತಿ ಎಂದು ನುಡಿದಿರುತ್ತಾರೆ. ಪ್ರತಿವಾದಿಯರಿಗೆ ತೊಂದರೆ ಕೊಡಬೇಕು ಎಂಬ ದುರುದ್ದೇಶದಿಂದ ಅವರ ವಿರುದ್ಧ ಒಂದಾದ ನಂತರ ಮತ್ತೊಂದು ಎಂಬಂತೆ 3 ದಾವೆಗಳನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

5. ಈ ದಾವೆಯನ್ನು ಹೂಡಲು ವ್ಯಾಜ್ಯ ಕಾರಣ ಉದ್ಬವಗೊಂಡಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಯಾವ ಪರಿಹಾರ ಕೋರಿ ಹೂಡಿದ್ದೀರಾ? ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ದಾವಾ ಆಸ್ತಿಯು ನಮಗೆ ಸರಕಾರದಿಂದ ಮಂಜೂರು ಮಾಡಿದ ಆಸ್ತಿ ಆಗಿದ್ದು ಆ ಆಸ್ತಿಗೆ ಪ್ರತಿವಾದಿಯರು ತಕರಾರು ಮಾಡುತ್ತಿದ್ದರು ಆದರೆ ನಾವು ದಾವೆಯನ್ನು ಮಾಡಿರುವುದಿಲ್ಲ ಪ್ರತಿವಾದಿಯರೇ ನಮ್ಮ ವಿರುದ್ಧ ಈ ದಾವೆಯನ್ನು ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಪ್ರಧಾನ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.